One thing is certainly, namely that no well-to-do person who is having these lands will be allowed to continue on Government lands.

ಶ್ರೀ ಎಚ್. ಗಂಗಾಧರನ್.—ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬಿರ್ಲಾ ಫ್ಯಾಕ್ಟರಿಗೆಂದು ಸರ್ಕಾರದವರು ಸುಮಾರು ೩೦೦ ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪ ಭಾಗ ಜಮೀನನ್ನು ಟಿಬಿಟಿಯನ್ನರಿಗೆ ಕೊಡಬೇಕೆಂದು ವಾಪಸ್ ತೆಗೆದುಕೊಂಡಿದ್ದಾರೆ. ಅಲ್ಲಿ ಬಹಳ ಜನ ಹರಿಜನರು ಇದ್ದು, ಅವರಲ್ಲಿ ಬಹುತೇಕ ಜನರು ನಿರ್ಗತಿಕರಿದ್ದಾರೆ. ಅಲ್ಲಿ ಸಾಕಷ್ಟು ಜಮೀನು ಇವರಿಗೆ ಕೊಡುವುದಕ್ಕೆ ಇಲ್ಲ. ಈ ಜಮೀನನ್ನು ವಾಪಸ್ ತೆಗೆದುಕೊಂಡು ಹರಿಜನರಿಗೆ ಹಂಚತಕ್ಕ ವ್ಯವಸ್ಥೆ ಮಾಡುತ್ತೀರಾ? ಈ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ಆ ಪ್ರದೇಶದಲ್ಲಿ ಹರಿಜನರಿಗೆ ಜಮೀನು ಹಂಚತಕ್ಕ ವಿಷಯ ಸರ್ಕಾರದ ಗಮನದಲ್ಲಿದೆ. ಇದರ ಬಗ್ಗೆ ತೀವ್ರವಾಗಿ ನಾವು ತೀರ್ಮಾನ ತೆಗೆದುಕೊಳ್ಳುವವರಿದ್ದೇವೆ. ಯಾವ ಜಮೀನನ್ನು ಯಾರು ಯಾರಿಗೆ ಕೊಡಬೇಕು ಎಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

Karnataka State Sports Council

104 SRI P. RAMDEV (Malleswaram) —Will the Minister of State for Information and Youth Services be pleased to state:—

(a) the names of the Members of the Karnataka State Sports Council for the last three years and the experience they have in the field of sports;

(b) the number of meetings held by the Sports Council or its Standing Committee during the last three years?

SRI K. H. SRINIVAS (Minister of State for Information and Youth Services).—

(a) The list of Members is placed on the Table of the House.**

(b) The Sports Council and Standing Committee met for 3 times and 9 times respectively.

ಶ್ರೀ ಪಿ. ರಾಮದೇವ್.—ಸ್ವಾಮಿ ಕರ್ನಾಟಕ ಸ್ಪೋರ್ಟ್ಸ್ ಕೌನ್ಸಿಲ್ ಸದಸ್ಯರುಗಳನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ಮಾಡುತ್ತೀರಿ?

† ಶ್ರೀ ಕೆ. ಎಚ್. ಶ್ರೀನಿವಾಸ್.—ಮುಖ್ಯ ಪ್ರಶ್ನೆಗೆ ಈ ಪ್ರಶ್ನೆ ಸಂಬಂಧ ಪಟ್ಟಿಲ್ಲ. ಯಾರಿಗೆ ಕ್ರೀಡೆಗಳಲ್ಲಿ ಹೆಚ್ಚಿನ ಅನುಭವ ಇದೆ, ಮತ್ತು ಕ್ರೀಡಾ ಪರಿಷತ್ತಿನ ಅಥ ಪರಿಷತ್ತಿನ ಆಡಳಿತವನ್ನು ನಡೆಸುವುದಕ್ಕೆ ಇರಬಹುದಾದಂಥ ಸಾಮರ್ಥ್ಯವನ್ನು ನಾವು ಗುರುತಿಸಿ, ಅಂಥವರನ್ನು ಇದರಲ್ಲಿ ಸದಸ್ಯರನ್ನಾಗಿ ನೇಮಕ ಮಾಡುತ್ತೇವೆ.

ಶ್ರೀ ಪಿ. ರಾಮದೇವ್.—ತಾವು ಕೊಟ್ಟಿರತಕ್ಕ ಪಟ್ಟಿಯಲ್ಲಿ ಸುಮಾರು ೨೧ ಜನ ಸದಸ್ಯರನ್ನು ಈ ಪರಿಷತ್ತಿನಲ್ಲಿ ಸದಸ್ಯರನ್ನಾಗಿ ಹಾಕಿದ್ದೀರಿ. ಇದರಲ್ಲಿರುವ ಅನೇಕರಿಗೆ ಕ್ರೀಡೆಗಳನ್ನು ಆಡಿ ಅಭ್ಯಾಸವಿಲ್ಲ, ನೋಡಿಯೂ ಅಭ್ಯಾಸವೂ ಇಲ್ಲ. ಇದು ತಪ್ಪು ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ ಆದರೆ ಮಾನ್ಯ ಸದಸ್ಯರ ಅವಗಾಹನೆಗೆ ಒಂದು ಮುಖ್ಯವಾದ ವಿಷಯವನ್ನು ತರಬೇಕು ಎಂದರೆ, ಇದನ್ನು ಸಂಪೂರ್ಣವಾಗಿ

** Copy placed in the Karnataka Legislature Library vide No. 9 dated 20th March 1979.

ಪುನರ್‌ರ್‌ಚನೆ ಮಾಡಿದಂಥ ಒಂದು ಆರ್ಡ್ಲ್ ಇನ್ನೊಂದು ದಿನದಲ್ಲಿ ಹೊರಬೀಳುತ್ತಲಿದೆ. ಮಾನ್ಯ ಸದಸ್ಯರೂ ಸಹ ಇದರಲ್ಲಿ ಸದಸ್ಯರಾಗಿ ಜವಾಬ್ದಾರಿಯನ್ನು ನಿರ್ವಹಿಸತಕ್ಕ ಅವಕಾಶ ಬರುತ್ತದೆ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಪಿ ರಾಮದೇವ್.—ನನ್ನನ್ನು ಈ ಮಂಡಳಿಯಲ್ಲಿ ಸದಸ್ಯನನ್ನಾಗಿ ಮಾಡಿದ್ದಕ್ಕೆ ಸಂತೋಷ. ಇತರೆ ರಾಜ್ಯಗಳಲ್ಲಿ, ರಾಜ್ಯಗಳಲ್ಲಿ ಕ್ರೀಡೆಗಳಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯದರ್ಶಿಗಳನ್ನು ಮಂಡಳಿಯಲ್ಲಿ ಸದಸ್ಯರನ್ನಾಗಿ ಮಾಡಿ ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆ ರೀತಿಯಾಗಿ ಮಾಡುವುದಕ್ಕೆ ತಮಗೆ ಕಷ್ಟವಾಗುತ್ತದೆಯೇ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ಬಹಳ ಕಷ್ಟವಾಗುತ್ತದೆ. ರಾಜ್ಯದ ಎಲ್ಲಾ ಸಂಘಸಂಸ್ಥೆಗಳ ಕಾರ್ಯದರ್ಶಿಗಳನ್ನು ಇದರಲ್ಲಿ ಸೇರಿಸಿದರೆ, ತೊಂದರೆಯಾಗುತ್ತದೆ. ಈ ವ್ಯವಸ್ಥೆ ಬೇರೆ ರಾಜ್ಯಗಳಲ್ಲಿರಬಹುದು. ನಾವು ಪುನರ್‌ರ್‌ಚಿಸಿರತಕ್ಕ ಮಂಡಳಿಯಲ್ಲಿ ಅನೇಕ ಸಂಘಸಂಸ್ಥೆಗಳ ಕಾರ್ಯದರ್ಶಿಗಳು ಸದಸ್ಯರಾಗಿದ್ದಾರೆ. ನಾವು ಈ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ಮಂಡಳಿ ನ್ಯಾಯವಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ಯಾವ ರೀತಿಯ ಜನರನ್ನು ಇದರಲ್ಲಿ ಸೇರಿಸಬೇಕು ಎನ್ನುವುದನ್ನು ಯೋಚಿಸಿ, ಸರಿಯಾದ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಟಿ. ತಮ್ಮಯ್ಯ.—ಮಾನ್ಯ ಸದಸ್ಯರಾದ ರಾಂದೇವ್ ಅವರಿಗೆ ಯಾವ ಕ್ರೀಡೆಯಲ್ಲಿ ಅನುಭವ ಇದೆ, ಯಾವ ಕ್ವಾಲಿಫಿಕೇಷನ್ ಮೇಲೆ ಇವರನ್ನು ಮಂಡಳಿಯಲ್ಲಿ ಸದಸ್ಯರನ್ನಾಗಿ ಹಾಕಿದ್ದೀರಿ?

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಸದಸ್ಯರಾದ ರಾಂದೇವ್ ಅವರು ಅಪ್ರತಿಮ ಈಜುಗಾರರು. ಮತ್ತು ಎಲಿಜಬಲ್ ಬ್ಯಾಚುಲರ್ ಹೌದು.

ಶ್ರೀ ಎಸ್. ಆರ್. ಬೊಮ್ಮಾಯಿ. –ನಮ್ಮಲ್ಲಿ ಎಲಿಜಬಲ್ ಬ್ಯಾಚಲರ್ಸ್ ಬಹಳ ಜನರು ಇದ್ದಾರೆ. ಅವರಿಗೂ ಸಹ ಈ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇದನ್ನು ಸೂಕ್ತ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇವೆ.

Fishing Works in North Kanara and South Kanara Districts

155 SRI U. B. BORKAR (Sirsi).—Will the Minister of State for Housing be pleased to state:—

(a) the number of fisher men in North Kanara and South Kanara Districts;

(b) in how many types of fishing works they are engaged in these districts;

(c) the number of pursian boats and nets that have been supplied to the fishermen in these districts so far;

(d) the number of fish freezing plants in these districts;

(e) the financial help given to the fishermen in these districts, so far;

(f) whether Government have made any arrangement for the repair of pursian boats, freezing installations etc., in these districts?

SRI P. F. RODRIGUES (Minister of State for Housing).—

(a) North Kanara Disrtict ... 64 311
South Kanara District ... 61,088

(b)